ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 04-01-2018
ಪಾಟೀ ಸವಾಲು: : ಶ್ರೀ ಬಿ ಎಸ ಎಸ ಪ್ರತಿವಾದಿ **7** ರಿಂದ **10**
ಪರ ವಕೀಲರಿಂದ

ನಾನು ಹೂಡಿರುವ ಜಮೀನಿನ ಸರ್ವೆನಂಬರ್ 525/4 . ಸರ್ವೆನಂಬರ್ 525/4 ರಲ್ಲಿ ಎಷ್ಟು ಪೋಡ್ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ಕಾಲಂ ನಂ. 9 ರಲ್ಲಿ ಕರಿಯಪ್ಪ ಬಿನ ಚಿಕ್ಕೈದೇಗೌಡ ಅವರು ಈಗ ಜೀವಂತ ಇಲ್ಲ . ಅವರು 2004 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ಜಮೀನಿನ ಪಶ್ಚಿಮ ದಿಕ್ಕಿಗೆ ಕರಿಯಪ್ಪ ಬಿನ ಚಿಕ್ಕೈದೇಗೌಡ ಇವರ ಜಮೀನು . ಕರಿಯಪ್ಪ ಬಿನ ಚಿಕ್ಕೈದೇಗೌಡ ಇವರು 1994 ರಲ್ಲಿ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಹೌದು. ನಿಪಿ 2 ರಲ್ಲಿ ನಮೂದು ಮಾಡಿರುವ ದೇವಿರಮ್ಮ ಎನ್ನುವವರನ್ನು ಈ ಕೇಸನಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ. ಜಮೀನು ಅಳತೆಗೆ ಅರ್ಜಿ ಕೊಟ್ಟಾಗ ಕರಿಯಪ್ಪ ಜೀವಂತ ಇರಲಿಲ್ಲ ಎಂದರೆ ಹೌದು. ನಿಪಿ 9 ರ ಪ್ರಕಾರ ಕರಿಯಪ್ಪರವರ ವಾರಸುದಾರರಿಗೆ ನೋಟೀಸ ಕೊಟ್ಟಿದ್ದರಾ ಎಂದರೆ ಹೌದು. ಆ ನೋಟೀಸ ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಇಲ್ಲ. ನಿಪಿ 8 ರ ಪ್ರಕಾರ ಕರಿಯಪ್ಪ , ಕೃಷ್ಣಾನಂದ ಮತ್ತು ಪುಟ್ಟಲಿಂಗಮ್ಮ ಮತ್ತು ಮಕ್ಕಳ ಹೆಸರನ್ನು ನಮೂದು ಮಾಡಿ ವರದಿ ಕೊಟ್ಟಿರುತ್ತಾರೆ. ನಿಪಿ 8 ರ ಪ್ರಕಾರ 2 ಮತ್ತು 3 ನೇ ಪೋಡಿನ ಮಾಲೀಕರು ಮಾತ್ರ ಒತ್ತುವರಿ ಮಾಡಿರುತ್ತಾರೆ ಎಂದು ವರದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕರಿಯಪ್ಪ ಎನ್ನುವವರಿಗೆ 525/1 ಪೈಪಿ–2 ರಲ್ಲಿ ಜಮೀನು ಇದೆ ಎಂದರೆ

ಹೌದು. 7 ರಿಂದ 10 ನೇ ಪ್ರತಿವಾದಿಯರು ನನಗೆ ಸೇರಿದ ಜಮೀನು ಒತ್ತುವರಿ ಮಾಡಿರುವುದಿಲ್ಲ ವಿನಾಕಾರಣ 7 ರಿಂದ 10 ನೇ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. 7 ರಿಂದ 10 ನೇ ಪ್ರತಿವಾದಿಯರು ಒತ್ತುವರಿ ಮಾಡದೇ ಇರುವುದರಿಂದ ಅವರು ಯಾವುದೇ ಫಸಲು ನಷ್ಟ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. 7 ರಿಂದ 10 ನೇ ಪ್ರತಿವಾದಿಯರು ಎಷ್ಟು ಗುಂಟೆ ಜಮೀನು ಒತ್ತುವರಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಎರಡು ಜಮೀನುಗಳಿಂದ 5 ½ ಗುಂಟೆ ಜಮೀನು ಒತ್ತು ವರಿ ಮಾಡಿರುತ್ತಾರೆ . 7 ರಿಂದ 10 ನೇ ಪ್ರತಿವಾದಿಯರು 5 ½ ಗುಂಟೆ ಜಮೀನು ಒತ್ತು ವರಿ ಮಾಡಿರುವುದಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಾ ಇದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

**ಪಾಟೀಸವಾಲು:** 3 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು , ಯಾವುದೇ ಸಮಂಜಸ ಕಾರಣ ಹೇಳದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪಾಟೀ ಸವಾಲು: 5 ಮತ್ತು 6 ನೇ ಪ್ರತಿವಾದಿಯರು ಗೈರು ಹಾಜರು ಆದ್ದರಿಂದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ. ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಶ್ರೀರಂಗಪಟ್ಟಣ.